## ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 8210/2023 ಸಿ.ಡಬ್ಲ್ಯೂ –8 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | ಃ | ಬಸವರಾಜ |
| ತಂದೆಃ ಗಂಡ | ಃ | ಶಿವಪುತ್ರಪ್ಪಾ |
| ವಯಸ್ಸು | ಃ | ೩೫ ವರ್ಷ |
| ಉದ್ಯೋಗ | : | ಪೋಲಿಸ್ ಪೇದೆ |
| ವಾಸಸ್ಥಳ | ಃ | ನರೋಣಾ |

ದಿನಾಂಕಃ04.09.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ನಾನು ಜೂನ್ 2020 ರಿಂದ ಇಲ್ಲಿಯವರೆಗೆ ನರೋಣಾ ಪೋಲಿಸ್ ಠಾಣೆಯಲ್ಲಿ ಪೇದೆ ಅಂತಾ ಕೆಲಸ ಮಾಡುತ್ತಿದ್ದೇನೆ.

ಚಾಸಾ 10 ರವರ ಆದೇಶದ ಪ್ರಕಾರ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಮುದ್ದೇ ಮಾಲುಗಳನ್ನು ಅಂದರೆ ಪವರ ಕುಲ್ ಬಿಯರನ 650 ಎಮ್ ಎಲ್ ನ 6 ಬಾಟಲಗಳು, ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರನ 650 ಎಮ್ ಎಲ್ ನ 19 ಬಾಟಲುಗಳು, ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರನ 330 ಎಮ್ ಎಲ್ ನ 08 ಬಾಟಲುಗಳು 90 ಎಮ. ಎಲ್ ಓರಿಜಿನಲ್ ಚಾಯಿಸ್ ವಿಸ್ಕಿಯ 120 ಪೌಚಗಳು, ದಿಃ 07-09-2023 ರಂದು ಎಪ ಎಸ್ ಎಲ್ ಕುರಿತು ಮಾನ್ಯ ಉಪನಿರ್ದೇಶಕರು ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯ ನಾಗೇನಹಳ್ಳಿರವರಲ್ಲಿ ಜಮಾ ಮಾಡಿ ಠಾಣಾ ಅಧಿಕಾರಿಯ ಮುಂದೆ ವರದಿ ಸಲ್ಲಿಸಿರುತ್ತೇನೆ.

ಸಾಕ್ಷಿಯು ದಿಃ 07-09-2023 ರಂದು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಅಂತಾ ಗುರುತಿಸಲಾಯಿತು. ಸದರಿ ದಾಖಲೆಗಳಲ್ಲಿ ಸಾಕ್ಷಿಯ ಸಹಿಯನ್ನು ನಿಪಿ. 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು.ಮಾ. 1 ರಿಂದ 4 ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲು ಆರೋಪಿತರ ಪರ ಶ್ರೀ. ಎಸ ಎ ಕೆ ವಕೀಲರಿಂದಃ**

ಚಾಸಾ ೧ ರವರು ನನ್ನ ಮೇಲಾಧಿಕಾರಿ ಎಂದರೆ ಸರಿ. ನಾನು ಅವರು ಹೇಳಿದಂತೆ ಸಾಕ್ಷಿ ಹೇಳುತ್ತಿದ್ದೇನೇ ಎಂದರೆ ಸರಿಯಲ್ಲ. ಸೀಲ್ ಮಾಡಿದ ಮು.ಮಾಲನ್ನು ನನಗೆ ಠಾಣಾಧಿಕಾರಿಯವರು ನೀಡಿರುತ್ತಾರೆ. ನನಗೆ ಸದರಿ ಸೀಲ್ ಮಾಡಿದ ಮು.ಮಾಲುಗಳ ಒಳಗಡೆ ಏನು ಇರುತ್ತವೆ ಅಂತಾ ಗೊತ್ತು ಆಗುವುದಿಲ್ಲ ಎಂದರೆ ಸಾಕ್ಷಿಯು ಅದರ ಮೇಲೆ ನಮೂದಿಸಿರುತ್ತಾರೆ ಮತ್ತು ನಾನು ಪರೀಕ್ಷೆಗೆ ಕೊಡಬೇಕಾದಾಗ ಅದನ್ನು ತೆಗೆದು ಏಣಿಸಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ಮು.ಮಾಲುಗಳು ಎಲ್ಲಾವು ಸೀಲಿ ಇದ್ದವು. ಸದರಿ ಮು.ಮಾಲುಗಳ ತಯಾರಿಸಿದ ದಿನಾಂಕ ಮತ್ತು ಸೀರಿಯಲ್ ನಂಬರನ್ನು ನಾನು ನೋಡಿರುವುದಿಲ್ಲ. ನಾನು ಯಾವುದೇ ಮು.ಮಾಲನ್ನು ತೆಗೆದುಕೊಂಡು ಹೋಗದೇ ಇದ್ದರೂ ಸಹಿತ ಮೇಲಾಧಿಕಾರಿಗಳ ಮಾತುಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೇ ಎಂದರೆ ಸರಿಯಲ್ಲ. ನಾನು ಜೂನ್ 2020 ರಿಂದ ಇಲ್ಲಿಯವರೆಗೆ ನರೋಣಾ ಪೋಲಿಸ್ ಠಾಣೆಯಲ್ಲಿ ಪೇದೆ ಅಂತಾ ಕೆಲಸ ಮಾಡುತ್ತಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ ೧೦ ರವರ ಆದೇಶದ ಪ್ರಕಾರ ಈ ಪ್ರಕರಣದಲ್ಲಿ ಜಪ್ತಿ ಪಡಿಸಿಕೊಂಡ ಮುದ್ದೇ ಮಾಲುಗಳನ್ನು ಅಂದರೆ ಪವರ ಕುಲ್ ಬಿಯರನ ೬೫೦ ಎಮ್ ಎಲ್ ನ ೬ ಬಾಟಲಗಳು, ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರನ ೬೫೦ ಎಮ್ ಎಲ್ ನ ೧೯ ಬಾಟಲುಗಳು, ಕಿಂಗ್ ಫಿಶರ್ ಸ್ಟ್ರಾಂಗ್ ಬಿಯರನ ೩೩೦ ಎಮ್ ಎಲ್ ನ ೦೮ ಬಾಟಲುಗಳು ೯೦ ಎಮ. ಎಲ್ ಓರಿಜಿನಲ್ ಚಾಯಿಸ್ ವಿಸ್ಕಿಯ ೧೨೦ ಪೌಚಗಳು, ದಿಃ ೦೭-೦೯-೨೦೨೩ ರಂದು ಎಪ ಎಸ್ ಎಲ್ ಕುರಿತು ಮಾನ್ಯ ಉಪನಿರ್ದೇಶಕರು ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯ ನಾಗೇನಹಳ್ಳಿರವರಲ್ಲಿ ಜಮಾ ಮಾಡಿ ಠಾಣಾ ಅಧಿಕಾರಿಯ ಮುಂದೆ ವರದಿ ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.